ಉಪನ್ಯಾಸಕಿಯಾಗಿದ್ದ ರಮಾ ಮಿತ್ರ ಲೋಹಿಯಾರ ಮೊದಲ ಭೇಟಿಯ ಬಗ್ಗೆ ಬರೆಯುತ್ತಾರೆ:

'ನಾನು ಮೊದಲ ಸಲ ಡಾ. ರಾಮಮನೋಹರ ಲೋಹಿಯಾರನ್ನು ಭೇಟಿಯಾಗಿದ್ದು 1946ರಲ್ಲಿ; ಅವರು ಆಗ್ರಾ ಜೈಲಿನಿಂದ ಬಿಡುಗಡೆಗೊಂಡಾಗ. ನಾನವರನ್ನು 'ಡಾಕ್ಟರ್ ಸಾಹೇಬ್' ಎಂದು ಕರೆಯುತ್ತಿದ್ದೆ. ಭಾರತದ ಎಲ್ಲೆಡೆಯಲ್ಲಿಯೂ ಜನ ಅವರನ್ನು ಹಾಗೇ ಕರೆಯುತ್ತಿದ್ದರು. 1947ರಿಂದ ಕೊನೆಯತನಕ ನಾನವರಿಗೆ ತುಂಬಾ ಹತ್ತಿರವಾಗಿದ್ದೆ.'

1949ರಿಂದ ರಮಾ ಮಿತ್ರ ದೆಹಲಿಯ ಮಿರಾಂಡ ಹೌಸ್ ಕಾಲೇಜಿನಲ್ಲಿ ಹಿಸ್ಟರಿ ಉಪನ್ಯಾಸಕಿಯಾಗಿದ್ದರು. ಲೋಹಿಯಾ ರಮಾಗೆ ಬರೆದ ಪತ್ರಗಳ ಸಂಕಲನ 'ಲೋಹಿಯಾ ತ್ರೂ ಲೆಟರ್ಸ್' 1983ರಲ್ಲಿ ಪ್ರಕಟವಾದ ಮೇಲೆ ರಮಾ ಹಾಗೂ ಲೋಹಿಯಾ ಸಂಬಂಧದ ಎಳೆಗಳು ಹೆಚ್ಚು ಗೋಚರವಾಗತೊಡಗಿದವು. ರಮಾ–ರಾಮಮನೋಹರರ ಸಂಕೀರ್ಣ, ಮುಕ್ತ, ಮಧುರ, ನೇರನಿಷ್ಠುರ, ಆತ್ಮೀಯ ಸ್ನೇಹಸಂಬಂಧದ ಸ್ವರೂಪವನ್ನು ಮುಂದಿನ ಅಧ್ಯಾಯವೊಂದರಲ್ಲಿ ನೋಡೋಣ!

ಗಾಂಧೀಜಿ ಬದುಕಿದ್ದ ಕಾಲದಲ್ಲೇ 'ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ' ತನ್ನ ಹೆಸರಿನಲ್ಲಿದ್ದ 'ಕಾಂಗ್ರೆಸ್' ಬಿಟ್ಟು 'ಸೋಷಲಿಸ್ಟ್ ಪಕ್ಷ' ಆಗಿತ್ತು. ಕಾಂಗ್ರೆಸ್ ಹಾಗೂ ಸೋಷಲಿಸ್ಟ್ ಪಕ್ಷಗಳ ಸಂಬಂಧದ ಬಗ್ಗೆ ಲೋಹಿಯಾ ಜೊತೆ ಮಾತಾಡುವೆನೆಂದಿದ್ದ ಗಾಂಧೀಜಿ ತೀರಿಕೊಂಡಿದ್ದರು. ನರೇಂದ್ರದೇವ, ಜೆ.ಪಿ., ಅರುಣಾ ಅಸಫ್ ಅಲಿ ಥರದವರಿಗೆ ನೆಹರು ದೇಶವನ್ನು ಸಮಾಜವಾದದೆಡೆಗೆ ಒಯ್ಯಬಲ್ಲರೆಂಬ ನಂಬಿಕೆಯಿತ್ತು; ಲೋಹಿಯಾರಲ್ಲಿ ಆ ನಂಬಿಕೆ ಕುಸಿಯತೊಡಗಿತ್ತು. ಬೇರೊಂದು ರಾಜಕೀಯ ಪರ್ಯಾಯದ ಅಗತ್ಯವಿದೆ ಎನ್ನಿಸತೊಡತೊಡಗಿತ್ತು.

'ಗಾಂಧೀಜಿಯವರ ನಿಧನದಿಂದಾಗಿ ನನ್ನ ಮೇಲಾದ ಒಳ್ಳೆಯದೋ ಕೆಟ್ಟದೋ ಆದ ಪರಿಣಾಮವೆಂದರೆ, ನಾನಿನ್ನು ನನ್ನ ಮನಸ್ಸಿಗೆ ಬಂದಂತೆ ಏನನ್ನು ಮಾಡುವುದಕ್ಕೂ ಸ್ವತಂತ್ರ ಎಂಬ ಭಾವನೆ ಮೂಡಿತು' ಎಂದುಕೊಳ್ಳುತ್ತಾರೆ ಲೋಹಿಯಾ: 'ಅವರು ಜೀವಿಸಿದ್ದಾಗ ನನ್ನ ಮೇಲೊಂದು ಅಂಕುಶವಿದೆಯೆಂದೇ ಭಾಸವಾಗುತ್ತಿತ್ತು. ಅಂದರೆ, ನಾನು ತೀರಾ ಅವಿವೇಕದ ಕೆಲಸಗಳನ್ನು ಮಾಡಬಾರದು ಎಂಬ ಭಾವನೆಯಿತ್ತು. ನಾನು ಗಾಂಧೀಜಿಯವರಿಗೆ ಹೆದರಿಕೊಂಡಿರುತ್ತಿದ್ದೆನೆಂದು ಇದರರ್ಥವಲ್ಲ. ಒಮ್ಮೊಮ್ಮೆ ಅವರೊಡನೆ ಮಾತಾಡುತ್ತಿರುವಾಗ ತುಂಬ ಬಿರುಸಾದ, ಒರಟಾದ ಮಾತುಗಳನ್ನೂ ಬಳಸುತ್ತಿದ್ದೆ. ಹಾಗೆ ಮಾತಾಡುವಾಗ ನನಗೆ ಎಳ್ಳಷ್ಟೂ ಭಯವೆನಿಸುತ್ತಿರಲಿಲ್ಲ. ಆದರೆ, ಅವರು ಬದುಕಿರುವವರೆಗೆ ನಾನು ತೀರಾ ಕೆಡುಕಿನವನಾಗಬಾರದು ಎಂಬ ಬಯಕೆ ಮಾತ್ರ ಇತ್ತು.'

ಕ್ವಿಟ್ ಇಂಡಿಯಾ ಚಳುವಳಿಯ ಕಾಲದ ಹೋರಾಟ ಸಮಾಜವಾದಿ ಪಕ್ಷವನ್ನು ವಿಭಿನ್ನ ರಾಜಕೀಯ ಪಕ್ಷವಾಗಿಸಿತ್ತು. ಸ್ವಾತಂತ್ರ್ಯದ ನಂತರವೂ ಸಮಾಜವಾದಿ ಪಕ್ಷ 'ಚಳುವಳಿ ರಾಜಕಾರಣ'ವನ್ನು ಮುಂದುವರಿಸಿತು; ಮಧ್ಯಪ್ರದೇಶ, ರಾಜಾಸ್ತಾನ, ಒರಿಸ್ಸಾಗಳಲ್ಲಿ ಇನ್ನೂ ಉಳಿದುಕೊಂಡಿದ್ದ ಬ್ರಿಟಿಷ್ ಕಾಲದ ದೇಶಿ ಸಂಸ್ಥಾನಗಳ ವಿರುದ್ಧ ಚಳುವಳಿ ಶುರು ಮಾಡಿತು. ಸ್ಥಳೀಯ ಅರಸರ ಆಡಳಿತದಲ್ಲಿದ್ದ ಈ ಸಂಸ್ಥಾನಗಳು ಕೋಮುವಾದಿ ಸಂಘಟನೆಗಳ ತಾಣಗಳಾಗಿದ್ದನ್ನು ಕಂಡ ಲೋಹಿಯಾ, ಮಧ್ಯಪ್ರದೇಶದ ರೇವಾದ ದೇಶಿ ಸಂಸ್ಥಾನದ ವಿರುದ್ಧ ಸಮಾಜವಾದಿಗಳ ಪ್ರತಿಭಟನೆಯನ್ನು ಮುನ್ನಡೆಸಿ, ಬಂಧನಕ್ಕೊಳಗಾದರು; ನಂತರ ಅವರನ್ನು ರಾಜ್ಯದ ಗಡಿಯಾಚೆಗೆ ತಂದುಬಿಡಲಾಯಿತು.

1948ರ ಚುನಾವಣೆಗಳ ಹೊತ್ತಿಗೆ ಸಮಾಜವಾದಿ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸುವ ನಿರ್ಧಾರ ತೆಗೆದುಕೊಂಡಿತು. ಮುಂಬಯಿ ಕಾರ್ಪೊರೇಶನ್ ಚುನಾವಣೆಯಲ್ಲಿ ಸಾಕಷ್ಟು ಸ್ಥಾನಗಳನ್ನೂ ಗೆದ್ದಿತು. ಉಪಚುನಾವಣೆಗಳಲ್ಲೂ ಪಕ್ಷದ ಸಾಧನೆ ಗಮನಾರ್ಹವಾಗಿತ್ತು. ಸಮಾಜವಾದಿಗಳು ಕೆಂಪು ಟೋಪಿ ಧರಿಸಲಾರಂಭಿಸಿದರು; ವಿಚಾರದ ಬದಲು ಟೋಪಿಯೇ ಎದ್ದು ಕಾಣುವ ಈ ಬಗೆಯನ್ನು ಲೋಹಿಯಾ ಒಪ್ಪಲಿಲ್ಲ.

ನೇಪಾಳದಲ್ಲಿ ರಾಣಾ ರಾಜಪ್ರಭುತ್ವದ ವಿರುದ್ಧ ನೇಪಾಳ ಕಾಂಗ್ರೆಸ್ ಸಮರ ಸಾರಿತು. ಸಮಾಜವಾದಿಗಳು ನೇಪಾಳ ಪರ ನಿಂತರು; 144ನೇ ಸೆಕ್ಷನ್ ಜಾರಿಯಲ್ಲಿದ್ದರೂ, ದೆಹಲಿಯ ನೇಪಾಳ ರಾಯಭಾರಿಯ ಮನೆಯೆದುರು ಶಾಂತಿಯುತ ಪ್ರತಿಭಟನೆ ಮಾಡಿದರು; ಲೋಹಿಯಾ ಹಾಗೂ ಸಮಾಜವಾದಿ ಸಂಗಾತಿಗಳು ಸೆರೆಮನೆವಾಸಿಯಾದರು. ಸ್ವತಂತ್ರ ಭಾರತದಲ್ಲೂ ಲೋಹಿಯಾ ಸೆರೆಮನೆವಾಸಿಯಾದಾಗ ಜನರ ಅನುಕಂಪ ಅವರೆಡೆಗೆ ತಿರುಗತೊಡಗಿತು; ಇದು ನೆಹರುಗೆ ತಲೆನೋವಾಗತೊಡಗಿತು.

ನೆಹರು ತಮ್ಮ ಮಗಳು ಇಂದು (ಇಂದಿರಾ ಪ್ರಿಯದರ್ಶಿನಿ) ಕೂಡ ಜೈಲಿನಲ್ಲಿದ್ದ ಲೋಹಿಯಾರನ್ನು ಭೇಟಿ ಮಾಡಲು ಹೊರಟಿದ್ದನ್ನು ಪಟೇಲರಿಗೆ ಬರೆದ ಪತ್ರದಲ್ಲಿ ಪ್ರಸ್ತಾಪಿಸುತ್ತಾರೆ: 'ನಿನಗಿಷ್ಟವಿದ್ದರೆ ಅಲ್ಲಿಗೆ ಹೋಗಲು ನೀನು ಸ್ವತಂತ್ರಳು' ಎಂದು ಹೇಳಿದೆ. ಆಕೆ ಹೋಗಲಿಲ್ಲ. ಆಕೆ ಅಲ್ಲಿಗೆ ಹೋಗುವುದು ನನಗೆ ಒಂಚೂರೂ ಇಷ್ಟವಿಲ್ಲದಿದ್ದರೂ, ಅವಳು ಹೋಗುವುದನ್ನು ನಾನು ತಡೆಯುತ್ತಿರಲಿಲ್ಲ.'

ಈ ನಡುವೆ ನೆಹರೂರನ್ನು ಭೇಟಿಯಾದ ಪಶ್ಚಿಮದ ಪತ್ರಕರ್ತನೊಬ್ಬ, 'ನೀವೇಕೆ ಸಮಾಜವಾದಿಗಳನ್ನೆಲ್ಲ ಜೈಲಿಗೆ ಹಾಕಿಸುತ್ತಿದ್ದೀರಿ?' ಎಂದು ಕೇಳಿಬಿಟ್ಟ! ನೆಹರು ಆತನಿಗೆ ಕಟುವಾದ ಉತ್ತರ ಕೊಟ್ಟರೂ ವಿದೇಶಗಳಲ್ಲಿ ತಮ್ಮ ಇಮೇಜಿಗೆ ಧಕ್ಕೆ ಬರುತ್ತಿದೆಯೆಂಬ ಆತಂಕ ಶುರುವಾಯಿತು. ಲೋಹಿಯಾ ಮತ್ತು ಸಮಾಜವಾದಿಗಳನ್ನು ಬೇಗ ಬಿಡುಗಡೆ ಮಾಡಲು ಏರ್ಪಾಡು ಮಾಡುವಂತೆ ಗೃಹಮಂತ್ರಿ ಪಟೇಲರಿಗೆ ಪತ್ರ ಬರೆದರು; ಪಟೇಲರು ಕಾನೂನು, ಕಟ್ಟಳೆಗಳು ಏನು ಹೇಳುತ್ತವೆಂದು ಪರಿಶೀಲಿಸಲು ಅಯ್ಯಂಗಾರ್ ಎಂಬ ಅಧಿಕಾರಿಯ ಬರವಿಗಾಗಿ ಕಾಯುತ್ತಿದ್ದರು!

ಆ ಘಟ್ಟದಲ್ಲಿ ಸ್ಟಾಕ್‌ಹೋಂನಲ್ಲಿ ನಡೆಯಲಿದ್ದ ವಿಶ್ವ ಸರ್ಕಾರ ಕುರಿತ ಚಿಂತನಾ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಲು ಲೋಹಿಯಾ ಆಯ್ಕೆಯಾದರು. ಈ ಆಹ್ವಾನವನ್ನೇ ನೆಪ ಮಾಡಿಕೊಂಡ ನೆಹರು, ತಕ್ಷಣ ಸಮಾಜವಾದಿಗಳನ್ನು ಬಿಡುಗಡೆ ಮಾಡಿಸಲು ಪಟೇಲರಿಗೆ ಬರೆದರು; 'ಲೋಹಿಯಾ ವಿದೇಶಕ್ಕೆ ಹೋಗುವುದು ಅವರಿಗೂ ಒಳ್ಳೆಯದೇ' ಎಂದು ಬರೆದಿದ್ದ ನೆಹರು ಇದು ತಮ್ಮ ಸರ್ಕಾರಕ್ಕೂ ಒಳ್ಳೆಯದೇ ಅಂದುಕೊಂಡಿದ್ದು ಅಚ್ಚರಿಯಲ್ಲ!

ಲೋಹಿಯಾರಿಂದ ನೆಹರು ಸರ್ಕಾರಕ್ಕೆ ಎದುರಾದ ಬಿಕ್ಕಟ್ಟುಗಳನ್ನು ಲೋಹಿಯಾ ದೃಷ್ಟಿಯಿಂದ ನೋಡಿ, ನೆಹರು–ಪಟೇಲರನ್ನು ಖಳರಾಗಿಸುವುದು ಚರಿತ್ರೆಗೆ ಎಸಗಿದ ತಪ್ಪಾಗುತ್ತದೆ. ಇವು ಅಂತರ್‌ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಸರ್ಕಾರದಲ್ಲಿರುವವರು ಹಾಗೂ ಸರ್ಕಾರದ ಹೊರಗಿರುವವರು ವರ್ತಿಸುವ ಕ್ರಮಗಳಲ್ಲಿರುವ ಭಿನ್ನತೆಗಳೆಂದು ಕೂಡ ನೋಡಬೇಕಾಗುತ್ತದೆ. ಎರಡು, ಮೂರು ವರ್ಷಗಳ ಕೆಳಗಷ್ಟೇ ವ್ಯವಸ್ಥೆಯ ವಿರುದ್ಧದ ಹೋರಾಟಗಾರರಾಗಿದ್ದ ಪಟೇಲ್, ನೆಹರು ಈಗ ವ್ಯವಸ್ಥೆಯ ರಕ್ಷಕರಾಗಿದ್ದರು; ಆದರೆ ಲೋಹಿಯಾರ ವ್ಯವಸ್ಥಾ ವಿರೋಧಿ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ.

ಸ್ಟಾಕ್‌ಹೋಂ ಸಮ್ಮೇಳನದಲ್ಲಿ ಲೋಹಿಯಾ ಏಷ್ಯನ್ ಸಮಾಜವಾದದ ರೂಪುರೇಖೆ ಮಂಡಿಸಿದ್ದು ಅವರನ್ನು ಸಮಾಜವಾದದ ಹೊಸ ವ್ಯಾಖ್ಯಾನಕಾರರನ್ನಾಗಿಸಿತ್ತು. ಐವತ್ತರ ದಶಕದ ಆರಂಭದಲ್ಲಿ ಆಲದ ಮರದ ಗುರುತಿನ ಸಮಾಜವಾದಿ ಪಕ್ಷ ಕಮ್ಯುನಿಸ್ಟ್ ಪಕ್ಷವನ್ನು ಬಿಟ್ಟರೆ ದೇಶದ ಪ್ರಮುಖ ವಿರೋಧ ಪಕ್ಷವಾಗಿ ಮೂಡಿತ್ತು. ಸಮಾಜವಾದಿ ಪಕ್ಷದ 'ಕಿಸಾನ್ ಸಭಾ' ರೈತರ ಸಂಘಟನೆ ಶುರು ಮಾಡಿತು. ವರ್ಗ ಹಾಗೂ ಜಾತಿಯ ಪ್ರಶ್ನೆಗಳೆರಡನ್ನೂ ಪಕ್ಷ ಸಮಾನವಾಗಿ ಪರಿಗಣಿಸಿತು. ದೇಶದ ರಾಜಕಾರಣಕ್ಕೆ ದಲಿತ, ಹಿಂದುಳಿದ ವರ್ಗಗಳು, ಮಹಿಳೆಯರು ಪ್ರವೇಶ ಮಾಡಲು ತಾತ್ವಿಕತೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಲೆತ್ನಿಸುತ್ತಾ ಸಮಾನತೆಯ ರಾಜಕಾರಣವನ್ನು ವಿಸ್ತರಿಸತೊಡಗಿತು. 1951. ಲೋಹಿಯಾ ಸಮಾಜವಾದಿಗಳ ವಿಶ್ವ ಸಮ್ಮೇಳನಕ್ಕೆಂದು ಜರ್ಮನಿಯ ಫ್ರಾಂಕ್‌ಫರ್ಟ್‌ಗೆ ಹೊರಡುವವರಿದ್ದರು. ಆಗ ಮೈಸೂರು ರಾಜ್ಯದ ಕಾಗೋಡಿನಲ್ಲಿ ಗೇಣಿದಾರರು ನಡೆಸುತ್ತಿದ್ದ ಹೋರಾಟವನ್ನು ಕನ್ನಡನಾಡಿನ ಸಮಾಜವಾದಿ ಪಕ್ಷ ಬೆಂಬಲಿಸಿತು. ಪಕ್ಷದ ಆಶಯವಾದ 'ಉಳುವವನೇ ಹೊಲದೊಡೆಯ' ಘೋಷಣೆಗೆ ತಕ್ಕ ಸಂದರ್ಭ ಬಂದಿತ್ತು. ಗೇಣಿದಾರರ ಹೋರಾಟವನ್ನು ಬೆಂಬಲಿಸಲು ಕಾಗೋಡಿಗೆ ಬರಬೇಕೆಂದು ರಾಜ್ಯ ಸಮಾಜವಾದಿ ಪಕ್ಷ ಲೋಹಿಯಾರನ್ನು ಕೇಳಿಕೊಂಡಿತು. ಲೋಹಿಯಾ ಶಿವಮೊಗ್ಗ ಜಿಲ್ಲೆಯ ಸಾಗರಕ್ಕೆ ಬಂದಿಳಿದರು.

(ಸಶೇಷ)